48

ಸಾಹಸದ ಕಥೆಗಳು

(ನೈಜಜೀವನದಿಂದ ಸಂಗ್ರಹಿಸಲ್ಪಟ್ಟ
ಸತ್ಯಕಥಾನಕಗಳು)

★

ಸಂಗ್ರಾಹಕರು ಮತ್ತು ಅನುವಾದಕರು:

ಕುಡ್ಪಿ ವಾಸುದೇವ ಶೆಣೈ

೧. ರ್ಹಾಯಿನ್ನಿನ ಧೀರ ಬಾಲಿಕೆ. ೨. ದೀಪಸ್ತಂಭದ ಧೀರರು.
೩ ಸಾಧ್ವಿಯ ಸಾಹಸ. ೪. ಪ್ರಾಮಾಣಿಕ ಬಾಲಕ.
೫. ನೊಯೊನ್ ನಗರದ ಧೀರೆ ಇತ್ಯಾದಿ.

1955.

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟರಾಯ (ವಿನೋದ ಕಥೆ)
೨. *ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು.
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ)
೫. *ಅದ್ಭುತತ್ಯಾಗ ಮತ್ತು ಇತರ ಕಥೆಗಳು
೬. ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)
೭. *'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)
೮. ಇಂಗ್ಲಿಷ್-ಕನ್ನಡ ಅರ್ಥಕೋಶ
೯. *ಲಂಚಕ್ಕೆ ಸಂಚಕಾರ
೧೦. ಟಿಶ್ಯೂ ಔಷಧಿಗಳ ಕೈಪಿಡಿ.
೧೧. ಶ್ರೀಕ್ಷೇತ್ರ ಧರ್ಮಸ್ಥಳ (ದ್ವಿ. ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು
೧೪. ವೆಂಕಟನ ಸಂಕಟ (ಏಕಾಂಕ ಪ್ರಹಸನ)
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ)
೧೬. ವೇಣೂರಿನ ಗತವೈಭವ.
೧೭. ಒಗಟುಗಳು [ದ್ವಿತೀಯ ಮುದ್ರಣ]
೧೮. ಜಗಳಗಂಟಿ ಮತ್ತು ಇತರ ಕಥೆಗಳು
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು
೨೧. *ಭಾರತದ ಮಹಾನಗರಗಳು (ಭಾಗ ೧)
೨೨. ತಿರುಕ್ಕುರಲ್
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು.
೨೪. ಭಾರತದ ಮಹಾನಗರಗಳು (ಭಾಗ ೨)
೨೫. ಧೈರ್ಯ ಮತ್ತು ಇತರ ಸತ್ಯಕಥೆಗಳು
೨೬. ಮಾರಾವತಾರ (ಏಕಪಾತ್ರ ಯಕ್ಷಗಾನ ಪ್ರಬಂಧ)
೨೭. ಹಾಸವಿಲಾಸ (ನಗೆಹನಿಗಳು)
೨೮. ಸತ್ಯವಂತ ಬಾಬಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು
೩೦. ಜಾತಕ ಕಥೆಗಳು
೩೧ ಕಾರ್ಕಳದ ಚರಿತ್ರೆ
೩೨. ಮರ್ಜಿ (ಏಕಾಂಕ ಪ್ರಹಸನ)
೩೩. ದರ್ಶನದ ಕಥೆಗಳು
೩೪. ಆಳುವಿನ ಹೊಳೆ ಮತ್ತು ಕೇಶವಭೂಪ (ಮಕ್ಕಳ ಕಥೆಗಳು)
೩೫. ಶರಾಬಿನ ಸಿಪಾಯಿಗಳು
೩೬. ಉಪದೇಶ ಶತಕ
೩೭. ನಿಮಗೆ ಗೊತ್ತಿದೆಯೇ?
೩೮. ಚತುರ ಚಮತ್ಕಾರ
೩೯. ಸತೀ ಸಾವಿತ್ರಿ
೪೦. ಆಭರಣಗಳ ಪೆಟ್ಟಿಗೆ ಇತರ ಕಥೆಗಳು
೪೧. ಭಾರತದ ಮಂತ್ರಿಮಂಡಲಗಳು
೪೨. ಕಾಲುಬಳೆಯ ಕಥೆ
೪೩. ಭಾರತದ ನಾಲ್ಕು ಕಲಶಗಳು
೪೪. ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು
೪೫. ಸುಭಾಷಿತ
೪೬ ೧೮೫೭ರ "ಸಿಪಾಯಿ ದಂಗೆ" ಅಥವಾ ಬ್ರಿಟಿಷರಿಗೆದುರಾಗಿ ಭಾರತೀಯರ ಸ್ವಾತಂತ್ರ್ಯಸಮ
೪೭. ಅಕಾಂಡ ತಾಂಡವ (ರೇಡಿಯೋ ನಾಟಕ)
೪೮. ಸಾಹಸದ ಕಥೆಗಳು.

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ನಾಲ್ವತ್ತೆಂಟು ಪುಸ್ತಕಗಳಲ್ಲಿ, ನಾಲ್ವತ್ತೆಂಟು ಆಣೆಗಳಿಗೆ, 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, 1064 ಪುಟಗಳನ್ನು ಕೊಟ್ಟಿರುತ್ತದೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು-೧

ಮುನ್ನುಡಿ

ಪ್ರತಿಯೊಂದು ದೇಶದ ಇತಿಹಾಸದಲ್ಲಿ, ಅಸಮ ಸಾಹಸ ತೋರಿದ ಬಾಲಕರ, ಬಾಲಕಿಯರ, ಮಹಿಳೆಯರ ಮತ್ತು ಪುರುಷರ ಕಥೆಗಳಿವೆ. ಕೆಲವರು ಭೂತದಯೆಯಿಂದ ಪ್ರೇರಿತರಾಗಿ, ಸಾಹಸಕಾರ್ಯಗಳನ್ನೆಸಗಿದರು. ಮತ್ತೆ ಕೆಲವರು ದೇಶಪ್ರೇಮದಿಂದ ಪ್ರೇರಿತರಾದರು. ಇನ್ನು ಕೆಲವರು ಸ್ವಾಮಿನಿಷ್ಠೆ, ಪ್ರಾಮಾಣಿಕತೆ, ಸತ್ಯಪ್ರಿಯತೆಗಳಿಂದ ಅದ್ಭುತ ಕಾರ್ಯಗಳನ್ನು ಮಾಡಿ ತೋರಿಸಿದರು. ಇಂಥ ಕಥೆಗಳಲ್ಲಿ, ಫ್ರಾನ್ಸಿಗೆ ಸಂಬಂಧಪಟ್ಟ ಎಂಟು ಕಥೆಗಳನ್ನಾರಿಸಿ ಇಲ್ಲಿ ಕೊಟ್ಟಿರುವೆವು. ಇವು ಕಲ್ಪಿತ ಕಥೆಗಳಲ್ಲ; ನಿಜವಾಗಿ ನಡೆದುವು ಎಂಬುದರಿಂದ, ಭಾಷಾ ಸೌಂದರ್ಯಕ್ಕಿಂತ ಆ ಕಥೆಗಳಲ್ಲಿ ಅಡಗಿರುವ ತತ್ತ್ವಕ್ಕಾಗಿ ಜನಾದರ ಹೊಂದದಿರಲಾರವು.

ಚಿಕ್ಕ ಬಾಲಕ-ಬಾಲಕಿಯರಿಗೆ ಕೂಡ ಸುಲಭವಾಗಿ ಅರ್ಥವಾಗುವಂತೆ ಭಾಷೆಯನ್ನು ಬಳಸಲಾಗಿದೆ.

ನಮ್ಮ ದೇಶದಲ್ಲೂ ಇಂಥ ಹಲವು ಸಾಹಸದ ಕಥೆಗಳಿರುವುವು. ಅವುಗಳನ್ನೂ, "ಒಂದಾಣೆ ಮಾಲೆ"ಯಲ್ಲಿ ಮುಂದೆ ಪ್ರಕಟಿಸಲಿದ್ದೇವೆ. ಈ ವರೆಗೆ, "ಒಂದಾಣೆ ಮಾಲೆ"ಯಲ್ಲಿ, ಜೀವನದ ನಾನಾ ನಡೆಗಳಲ್ಲಿ ಮಾರ್ಗದರ್ಶಿಯಾಗುವಂತಿರುವ ಅತ್ಯುಚ್ಚ ಕಥೆಗಳನ್ನೆ ಆರಿಸಿಕೊಟ್ಟಿರುವೆವು; ಇನ್ನು ಮುಂದೆಯೂ ಇಂಥ ಕಥೆಗಳೇ ಪ್ರಕಟವಾಗುವುವು. ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ಅವರ ಹಿರಿಯರೂ ಈ ಮಾಲೆಯಲ್ಲಿ ಪ್ರಕಟವಾಗುವ ಪ್ರತಿಯೊಂದು ಕಥೆಯಿಂದ ವಿದ್ಯಾಸಂಪನ್ನತೆ ಹೊಂದಿ, ಕಥೆಗಳಲ್ಲಿನ ಉದಾಹರಣೆಗಳಿಂದ ಸುಲಭವಾಗಿ ಮಹಾತತ್ತ್ವಗಳನ್ನರಿವಂತಾಗಬೇಕೆಂದೇ ನಮ್ಮ ಹಿರಿಯಾಸೆ. ಈ ಉದ್ದೇಶವನ್ನಿಟ್ಟುಕೊಂಡೇ ನಮ್ಮ ಈ ವರೆಗಿನ ಕಥಾಸಂಗ್ರಹಗಳು ಪ್ರಕಟವಾಗಿವೆ. (ಕೆಲವೊಮ್ಮೆ, ಮನೋರಂಜನೆಗಾಗಿ ವಿನೋದ ಕಥೆಗಳನ್ನೂ ಪ್ರಕಟಿಸಲಾಗುವುದು.) ಪ್ರತಿಯೋರ್ವನೂ ಇಂಥ ಉಚ್ಚ ಸಾಹಿತ್ಯವನ್ನು ಹರಡುವಲ್ಲಿ—ತನ್ನ ಮಿತ್ರರಿಗೂ ಇವುಗಳನ್ನು ಕೊಂಡುಕೊಳ್ಳುವಂತೆ ಸಲಹೆಯಿತ್ತು—ಸಹಕರಿಸಬೇಕಾಗಿ ಕೋರುವೆವು. ಶಾಲಾ ವಿದ್ಯಾರ್ಥಿ

ಸಾಹಸದ ಕಥೆಗಳು

೧. ರ್ಫ್ರಾಯ್ನಿನ ಧೀರ ಬಾಲಿಕೆ

ರ್ಫ್ರಾಯರ್ನ್ಸ್ ಪ್ರಾಂತ್ಯದ ಬೊನ್ಸ್ ನಗರವು ಅತಿ ಪುರಾತನವಾದುದು. ಅಲ್ಲಿಗೆ ಸಮೀಪವಿರುವ ಒಂದು ಚಿಕ್ಕ ಹಳ್ಳಿಯಲ್ಲಿ, ಒಂದು 'ಮಿಲ್' (ದೊಡ್ಡ ಚಕ್ರಗಳ ಗಿರಣಿ) ಇತ್ತು. ಹಾಂಚನ್ ಎಂಬಾಕೆ, ಅಲ್ಲಿ ಕೆಲಸಕ್ಕಿರುತಿದ್ದಳು.

ರವಿವಾರ, ರಜಾದಿನವಾಗಿತ್ತು. ಯಜಮಾನನು, ತನ್ನ ಐದು ವರ್ಷದ ಮಗನನ್ನೂ ಮಿಲ್ಲನ್ನೂ ಹಾಂಚನಳ ವಶಬಿಟ್ಟು, ಯಾವುದೋ ಕಾರ್ಯದಲ್ಲಿ ಹೊರಗೆ ಹೋದನು.

ಹಾಂಚನಳನ್ನು ಬೊಟ್ಟಿಲರ್ ಎಂಬಾತನು ಲಗ್ನವಾಗುವುದಾಗಿ ನಿಶ್ಚಯವಾಗಿತ್ತು. ಈ ಬೊಟ್ಟಿಲರನು ದುರ್ನಡತೆಯುವನಾಗಿದ್ದನು. ಅವನ ವಿಷಯವಾಗಿ ಕೆಲವರು, ಹಾಂಚನಳ ಕಿವಿಗೆ ಬೀಳುವಂತೆ, ಭಯಂಕರ ಕಥೆಗಳನ್ನು ಹೇಳಿದರೂ, ಹಾಂಚನಳು ಅವುಗಳನ್ನು ನಂಬಿರಲಿಲ್ಲ.

ಮಿಲ್ ಯಜಮಾನನು ದೂರಕ್ಕೆ ಹೋಗಿದ್ದ ಆ ರವಿವಾರದಂದು ಬೊಟ್ಟಿಲರನು ಅಲ್ಲಿಗೆ ಬಂದು, ಬಾಗಿಲು ತೆರೆವಂತೆ ತನ್ನ ಭಾವೀ ಪತ್ನಿಗೆ

ಗಳೆಲ್ಲರೂ ಈ ಸಾಹಿತ್ಯವನ್ನು ಸಂಗ್ರಹಿಸುವಂತೆ ಅಧ್ಯಾಪಕರೆಲ್ಲರೂ ಅವರಿಗೆ ಸಲಹೆ ಕೊಡುವರೆಂದೂ ನಿರೀಕ್ಷಿಸಲಾಗಿದೆ. ಎಳೆಯುವರಾಗಲಿ ಹಿರಿಯುರಾಗಲಿ—ಯಾವ ಆಕ್ಷೇಪವೂ ಇಲ್ಲದಂತೆ ಓದಬಹುದಾದ ಸಾಹಿತ್ಯ ಮಾತ್ರ ಒಂದಾಣೆ ಮಾಲೆಯಲ್ಲಿ ಪ್ರಕಟವಾಗುವುದೆಂದು ಪುನಃ ಭರವಸೆ ಕೊಡುವೆವು, ಮತ್ತು ಈ ವರೆಗೆ ಪ್ರಕಟವಾದ ಆಲ ಪ್ರಕಟಣೆಗಳು ಅವರ ಮುಂದಿರುವುದನ್ನು ವಿಮರ್ಶಾದೃಷ್ಟಿಯಿಂದ ನೋಡಿಯೇ ಇತರರಿಗೂ ಕೊಂಡುಕೊಳ್ಳುವಂತೆ ಪ್ರೋತ್ಸಾಹಿಸುವರೆಂದು ನಂಬುವೆವು.

ಕುಡ್ಪಿ ವಾಸುದೇವ ಶೆಣೈ.

ಹೇಳಿದನು. ಅವಳು ಬಾಗಿಲು ತೆರೆದು ಅವನನ್ನು ಒಳಗೆ ಕರೆದು ಉಪಾಹಾರವಿತ್ತು ಸತ್ಕರಿಸಿದಳು.

ತಿನ್ನುತ್ತಿದ್ದಂತೆ ಬೊಟ್ಟಿಲರನು, ತನ್ನ ಚೂರಿಯನ್ನು ಕೆಳಗೆ ಹಾಕಿದನು. ಹಾಂಚನಳು ಅದನ್ನು ಹೆಕ್ಕಿಕೊಡುವೆನೆಂದು ಬಗ್ಗಿದಳು. ಸರ್ಪವು ಹೆಡೆಯೆತ್ತಿ ಹೊಡೆವಂತೆ ಬೊಟ್ಟಿಲರನು ಬಗ್ಗಿದ ಆ ಬಾಲಿಕೆಯ ಕುತ್ತಿಗೆಗೆ ಎರಡೂ ಕೈಗಳನ್ನು ಹಾಕಿ ಗಟ್ಟಿಯಾಗಿ ಹಿಡಿದುಕೊಂಡು, "ಹಣವಿರಿಸಿರುವ ಸ್ಥಳವನ್ನು ಕೂಡಲೇ ತೋರಿಸು—ಇಲ್ಲದಿದ್ದರೆ ಸಾಯುವಿ" ಎಂದು ಬೆದರಿಕೆ ಹಾಕಿದನು.

ಹಾಂಚನಳಿಗೆ ಅವನ ಗುಣವು ಅಲ್ಲಿ ತಿಳಿಯಿತು. ಅವಳು ಅಧೀರಳಾಗಲಿಲ್ಲ. ಧೀರತನದಿಂದ, ಕುತ್ತಿಗೆ ಹಿಸುಕಲ್ಪಟ್ಟ ಸಂಕಷ್ಟದಲ್ಲಿ ಹೇಗೂ ನಾಲ್ಕು ಮಾತುಗಳನ್ನಾಡುತ್ತ, ಹಣದ ಪೆಟ್ಟಿಗೆಯನ್ನು ತೋರಿಸುವೆನೆನ್ನುತ್ತ, ಅವನನ್ನು, ತನ್ನ ಯಜಮಾನನ ಪೆಟ್ಟಿಗೆ ಇರುವ ಕೊಠಡಿಗೆ ಕರೆದೊಯ್ದಳು! ಆ ಪೆಟ್ಟಿಗೆಯನ್ನು ಒಡೆಯಲು ಅವನ ಕೈಗೆ ಒಂದು ಕೊಡಲಿಯನ್ನೂ ಕೊಟ್ಟಳು; ಮತ್ತು "ಇಷ್ಟಾದ ನಂತರ ತನ್ನ ಯಜಮಾನನಿಗೆ ಮುಖತೋರಿಸಲಾರೆ; ಇಲ್ಲಿ ನಿಲ್ಲಲಾರೆ. ಮಹಡಿಗೆ ಹೋಗಿ ನನ್ನ ಕೆಲವು ಬಟ್ಟೆಬರೆಗಳನ್ನೂ ಪುಡಿಕಾಸುಗಳನ್ನೂ ತೆಗೆದುಕೊಂಡು ಬರುತ್ತೇನೆ; ಮತ್ತೆ ಓಡಿಹೋಗೋಣ" ಎನ್ನುತ್ತ, ಹೊರಗೆ ಹೋಗಿ, ತನ್ನ ಯಜಮಾನನ ಕೊಠಡಿಯ ಕಡೆಗೆ ಇನ್ನೊಂದು ದಾರಿಯಾಗಿ ಹೋಗಿ, ಕಳ್ಳನನ್ನು ಒಳಗೇ ಇರಿಸಿ, ಬಾಗಿಲಿಕ್ಕಿದಳು. ಆ ಮೇಲೆ, ಕೆಳಗೆ ಓಡಿಹೋಗಿ, ಸಹಾಯ ತರಲು ಹೊರಗೆ ಬಂದಳು. ಯಜಮಾನನ ಚಿಕ್ಕ ಹುಡುಗನನ್ನು ಅಲ್ಲಿ ನೋಡಿ, "ಬೇಗ ನಿನ್ನ ತಂದೆಯಿದ್ದಲ್ಲಿಗೆ ಓಡಿ, ಅವನನ್ನು ಕರೆದುಕೊಂಡು ಬಾ; ಇಲ್ಲದಿದ್ದರೆ ಇಲ್ಲಿ ಅನಾಹುತ ನಡೆದೀತು ಎಂದು ತಿಳಿಸು' ಎನ್ನಲು, ಆ ಹುಡುಗನು, ತನ್ನ ತಂದೆ ಹೋಗಿದ್ದ ದಿಕ್ಕಿಗೆ ಧಾವಿಸಿದನು.

ಆಗಲೇ, ಒಂದು ಶಿಳ್ಳು ಕೇಳಿಸಿತು. ಹಾಂಚನಳು ಮನೆಕಡೆಗೆ ದೃಷ್ಟಿಯೆತ್ತಿದಳು. ಕೊಠಡಿಯೊಳಗೆ ಬಂಧಿತನಾಗಿದ್ದ ಬೊಟ್ಟಿಲರನು, ಹೊರ ಅಂಗಣದಲ್ಲೆಲ್ಲೋ ಅವಿತಿದ್ದ ತನ್ನ ಹಸ್ತಕನೊಬ್ಬನಿಗೆ, ಓಡುವ ಆ ಮಗುವನ್ನು ಹಿಡಿಯಬೇಕೆಂದು ಸಂಜ್ಞೆಮಾಡುತಿದ್ದನು! ಹೊರಗಿನ

ಧೂರ್ತನು ಮುಂದೆ ಹಾರಿ, ಓಡುವ ಆ ಪಸುಳೆಯನ್ನು ಹಿಡಿದು ವಿಲ್
ಕಡೆಗೆ ತರುವುದನ್ನು ಹಾಂಚನಳು ಕಂಡು ದಿಗ್ಭ್ರಾಂತಳಾದಳು!

ಮರುಕ್ಷಣದಲ್ಲಿ ಅವಳು ಧೈರ್ಯಮಾಡಿಕೊಂಡಳು. ಈಗ ಮಗು
ವನ್ನೂ ಬದುಕಿಸಬೇಕು. ಕೂಡಲೇ ಅವಳು ಮನೆಯೊಳಗೆ ಓಡಿ, ಬಾಗಿ
ಲಿಕ್ಕಿಕೊಂಡಳು. ಬಾಲಕನನ್ನೆತ್ತಿಕೊಂಡವನು ಕದ ತೆರೆವಂತೆ ಗದ್ದಲ
ಹೊಡಿದನು; ಬಾಗಿಲನ್ನೊಡೆವೆನೆಂದು ಬೆದರಿಕೆಹಾಕಿದನು. ಹುಡುಗನನ್ನು
ಚೂರಿಯಿಂದ ಕಿವಿದು ಕೊಲ್ಲುವೆನೆಂದನು. ಆದರೆ, ಹಾಂಚನಳು ದೇವ
ರಲ್ಲಿ ವಿಶ್ವಾಸವಿರಿಸಿದಳು. ಬಾಗಿಲು ತೆರೆಯಲಿಲ್ಲ.

"ಮಗುವನ್ನು ಚೂರಿಯಿಂದ ಸೀಳಿ ಕೊಂದುಹಾಕು!" ಎಂದು ಒದ
ರಿದನು, ಮನೆಯೊಳಗೆ ಬಂಧಿತನಾದ ಬೊಟ್ಟಿಲರ್! ಆ ಮಗುವಿನ ಕೊಲೆ
ಯಿಂದ ಅವರಿಗೆ ದೊರೆವ ಲಾಭವೇನು? ಕೊಲ್ಲಲಾರರು!—ಎಂದೇ ಹಾಂಚ
ನಳು ಧೈರ್ಯಪಟ್ಟುಕೊಂಡಳು.

ಹೊರಗಿರುವ ಕಳ್ಳನು, ಗಿರಣಿಗೆ ಬೆಂಕಿಕೊಡುವೆನೆಂದನು. ಮನೆ
ಕಡೆಗೆ ಹೋಗುವಾಗ, ಗಿರಣಿಯ ದೊಡ್ಡ ಚಕ್ರವಿರುವ ತೂತನ್ನು ನೋಡಿ
ದನು. ಮಗುವನ್ನು ಒಂದು ಹಗ್ಗದ ತುಂಡಿನಿಂದ ಕಟ್ಟಿ ಅಂಗಳದಲ್ಲಿ
ಇಟ್ಟುಬಿಟ್ಟು, ಚಕ್ರದ ಬದಿ ಕಾಣುವ ತೂತಿನ ಮೂಲಕ ಮನೆಯೊಳಗೆ
ಪ್ರವೇಶಿಸಲು ತೊಡಗಿದನು.

ಮಿಲ್ ಚಕ್ರವನ್ನು ಚಲಿಸಿದರೆ, "ರವಿವಾರದಂದು ಈ ಶಬ್ದವೇನು?
ಏನೋ ತಪ್ಪಿರಬೇಕು" ಎಂದೆಣಿಸಿ, ನೆರೆಕರೆಯವರು ಆ ಕಡೆಗೆ ಬಾರದೆ ಇರ
ಲಾರರು ಎಂದು ಹಾಂಚನಳು ಎಣಿಸಿ,ಆ ಪ್ರಚಂಡಚಕ್ರವನ್ನು ಚಲಿಸುವಂತೆ
ಮಾಡಿದಳು.ಚಕ್ರವು ಮೊದಲು ಮೆಲ್ಲನೆ ಉರುಳಿತು; ಆ ಮೇಲೆ ವೇಗವಾಗಿ
ಚಲಿಸಲಾರಂಭಿಸಿತು. ಕಳ್ಳನು ಅದರಲ್ಲಿ ಸಿಲುಕಿ, ಪ್ರಾಣಭಯದಿಂದ
ಚೀರಿದನು. ಹಾಂಚನಳು ಅವನ ಆರ್ತನಾದಕ್ಕೆ ಕಿವಿಗೊಡಲಿಲ್ಲ, ಅವನು
ಸಾಯಲಾರನೆಂದು ಆಕೆಗೆ ಖಚಿತವಿತ್ತು. ಚಕ್ರ ತಿರುಗುತ್ತ ಹೋಯಿತು-
ಈ ಜೀವಿಯನ್ನೂ ತನ್ನೊಂದಿಗೆ ಸುತ್ತಾಡಿಸಿತು. ಕಳ್ಳನು ಮೂರ್ಛೆ
ಹೋದನು. ಹಾಂಚನಳು, ತನ್ನ ಯಜಮಾನನ ಬರವನ್ನು ಕಾಯುತ
ಕುಳಿತಳು. ಒಳಗೊಬ್ಬ ಬಂಧಿತ ಕಳ್ಳ; ಚಕ್ರದಲ್ಲಿ ಇನ್ನೊಬ್ಬ ತಿರುಗುವ
ಕಳ್ಳ!

ಬಹಳ ಹೊತ್ತು ಕಳೆದ ನಂತರ ಯಜಮಾನನು ಬಂದನು; ದೂರದ ಜನರೂ, ಶಬ್ದವೇನೆಂದು ಬಹುಹೊತ್ತು ಆಲೋಚಿಸಿ, ಮತ್ತೆ ಬಂದರು.

ಕಳ್ಳರಿಬ್ಬರೂ ಸೆರೆಗೊಳಗಾದರು. ಅವರಿಗೆ ತಕ್ಕ ಶಿಕ್ಷೆಯೂ ವಿಧಿಸಲ್ಪಟ್ಟಿತು.

ಯಜಮಾನನ ಹಿರೀ ಮಗನು, ಹಾಂಚನಳ ಧೀರತೆಯನ್ನು ಮೆಚ್ಚಿ, ಅವಳನ್ನು ಲಗ್ನವಾದನು.

■■■■■■■■■

೨. ದೀಪಸ್ತಂಭದ ಧೀರರು

ಭೋರ್ಗರೆವ ಸಾಗರದಲ್ಲೊ, ನಿರ್ಜನವಾದ ಚಿಕ್ಕ ದ್ವೀಪಗಳಲ್ಲೊ ಅಲ್ಲಲ್ಲಿರುವ ದೀಪಸ್ತಂಭಗಳಲ್ಲಿ, ನಾಗರಿಕ ಲೋಕದಿಂದ ಬಲುದೂರ, ಆ ದೀಪಸ್ತಂಭಗಳನ್ನು ಬೆಳಕುಹಚ್ಚಿ ನೋಡಿಕೊಂಡಿರಲು ವಾಸಿಸುವ ಧೀರರ ಅನೇಕ ಕಥೆಗಳಿವೆ. ಫ್ರಾನ್ಸ್‌ದೇಶಕ್ಕೆ ಸಂಬಂಧಿಸಿದ ಕೆಡೋರ್ನಿಸ್ ದೀಪಸ್ತಂಭದಲ್ಲಿ (ಬೆಲ್ಲೆ ದ್ವೀಪ) ಒಬ್ಬ ಕೆಲಸಗಾರನು ತನ್ನ ಪತ್ನಿ ಮತ್ತು ಇಬ್ಬರು ಚಿಕ್ಕ ಮಕ್ಕಳೊಂದಿಗೆ ಇರುತಿದ್ದನು.

ಒಂದು ರಾತ್ರಿ, ಸ್ತಂಭದ ದೀಪವನ್ನು ದುರಸ್ತಿಗೊಳಿಸುತ್ತಿರುವಾಗ, ಅವನು ಥಕ್ಕನೆ ಅಸ್ವಸ್ಥಬಿದ್ದನು. ಅವನಿಗೆ ಸಹಾಯಕರೆಂದರೆ ಅವನ ಹೆಂಡತಿಯೊಬ್ಬಳೇ!

ಆ ಧೀರ ಮಹಿಳೆಯು ತನ್ನ ಪತಿಯ ಬಳಿಗೋಡಿ ಉಪಚರಿಸಬಹುದಿತ್ತು. ಅವನ ಜೀವವು ಅಪಾಯದಲ್ಲಿತ್ತು. ಆದರೆ, ಹಡಗುಗಳಿಗೆ ದೀಪ ತೋರಿಸಲೇ ಬೇಕು! ರಾತ್ರಿಯಾಗುತ್ತ ಬಂದಿತ್ತು. ಅವಳು ದೀಪದ ಕಡೆಗೆ ಹೋಗಿ, ಅದನ್ನು ಬೆಳಗಿಸಿದಳು, ಮತ್ತು ಕೂಡಲೇ ಪತಿಯ ಬಳಿಗೆ ಓಡಿಬಂದಳು. ಅವನು ಪ್ರಾಣೋತ್ಕ್ರಮಣ ಮಾಡುವ ಸ್ಥಿತಿಯಲ್ಲಿದ್ದನು. ಅಷ್ಟರೊಳಗೆ ಅವನ ಚಿಕ್ಕ ಹುಡುಗನು, "ಅಮ್ಮಾ, ದೀಪವು ತಿರುಗುತ್ತಿಲ್ಲ!" ಎಂದು ಕೂಗಿದನು.

ದೀಪಸ್ತಂಭದ ದೀಪಗಳು ತಿರುಗುತ್ತಾ ಇರುವುವು. ಅವು ಸ್ಥಿರವಾದರೆ, ಹಡಗುಗಳವರು ಮೋಸಹೋಗುವರು; ಹಡಗುಗಳು ದಾರಿತಪ್ಪಿ ಒಡೆದುಹೋಗಬಹುದು. ಆ ಹೆಂಗುಸು, ಮರಣಶಯ್ಯೆಯಲ್ಲಿರುವ ತನ್ನ

ಪತಿಯನ್ನು ಬಿಟ್ಟು, ದೀಪವಿದ್ದಲ್ಲಿಗೆ ಬಂದು, ದೀಪವನ್ನು ಪರೀಕ್ಷಿಸತೊಡಗಿದಳು. ಆ ದೀಪವು ಕೂಡಲೇ ದುರಸ್ತಿಮಾಡಲಾರದಷ್ಟು ಹಾಳಾಗಿತ್ತು!

ಮಕ್ಕಳಿಬ್ಬರೂ, ಅಸ್ವಸ್ಥದ ತಂದೆಯ ಬಳಿ ಕುಳಿತು ಅಳುತಿದ್ದರು. ದುಃಖಿತ ಮಾತೆಯು, ತನ್ನ ಕರ್ತವ್ಯವನ್ನು ಮರೆಯಲಾರದೆ, ಆ ಮಕ್ಕಳನ್ನು ಅಲ್ಲಿಂದ ಕರೆದೊಯ್ದು ದೀಪದ ಬಳಿ ಕುಳ್ಳಿರಿಸಿ, ರಾತ್ರೆಯಿಡೀ ಅದನ್ನು ಕೈಗಳಿಂದಲೇ ತಿರುಗಿಸುತ್ತಿರಲು ಹೇಳಿದಳು! ಹುಡುಗನ ವಯಸ್ಸು ಹತ್ತು ವರ್ಷ, ಹುಡುಗಿಯ ವಯಸ್ಸು ಏಳು. ಇಬ್ಬರೂ ಹಸುಳೆಯರು ದೀಪವಿರುವ ಮಹಡಿಯನ್ನೇರಿ, ರಾತ್ರೆ ಒಂಭತ್ತರಿಂದ ಬೆಳಗ್ಗೆ ಏಳರವರೆಗೆ, ಕಣ್ಣಿಗೆ ರೆಪ್ಪೆಹಚ್ಚದೆ ಕೈಯಿಂದ ತಿರುಗಿಸುತ್ತ ಕುಳಿತರು.

ಹೊರಗೆ ಸಾಗರವು ಭೋರ್ಗರೆಯುತಿತ್ತು; ಕಾಳರಾತ್ರಿಯು ದೃಶ್ಯವನ್ನು ಭಯಾನಕವಾಗಿ ಮಾಡಿತ್ತು. ಕೆಳಗೆ, ಅವನ ತಂದೆಯು ಮರಣಶಯ್ಯೆಯಲ್ಲಿದ್ದನು.

ಆ ಪುಟ್ಟ ಕೈಗಳು ಬೆಳಗ್ಗಿನ ತನಕ, ದೀಪವನ್ನು ತಿರುಗಿಸಿದುವು. ಕಡಲಿನಲ್ಲಿ ಹೋಗುವ ಹಡಗುಗಳು ಅಪಾಯಕ್ಕೊಳಗಾಗಬಾರದೆಂದು, ತಮ್ಮ ಸೇವೆಯರ್ಪಿಸಿದರು. ಬೆಳಕು ಕೊಟ್ಟು ಜೀವಗಳನ್ನು ಕಾಪಾಡುವ ಕಾರ್ಯದಲ್ಲಿ ಅವರು ತೊಡಗಿದ್ದಾಗ ಕೆಳಗೆ, ಅವರ ತಂದೆಯ ಕಣ್ಣುಗಳೊಳಗಣ ಬೆಳಕು ಆರಿಹೋಯಿತು; ಜೀವವು ಹಾರಿಹೋಯಿತು. ಧೀರ ಸ್ತ್ರೀಯು, ತನ್ನ ಪತಿಯ ಮೃತದೇಹದ ಬಳಿ ಕುಳಿತು ರೋಧಿಸುತಿದ್ದಳು. ಹೊರಗಿನ ಸಹಾಯವು ಬರುವಾಗ, ತಡವಾಗಿ ಹೋಗಿತ್ತು.

■■■■■■■■■

೩. ಸಾಧ್ವಿಯ ಸಾಹಸ

ಸ್ಕೊಟ್ಲೆಂಡಿನ ಶ್ರೀಮಂತ ಅರ್ಲ್ ನಿಥ್ಸಡೇಲನು, ರಾಜದ್ರೋಹಕ್ಕಾಗಿ, ಲಂಡನ್ ಟವರಿನಲ್ಲಿ ಬಂಧಿಸಲ್ಪಟ್ಟಿದ್ದನು. ಅವನಿಗೆ ಮರಣದಂಡನೆ ವಿಧಿಸಲಾಗಿತ್ತು. ನಿಥ್ಸಡೇಲನ ಪತ್ನಿ, ತನ್ನ ಪತಿಯ ಬಿಡುಗಡೆಯನ್ನು ಯೋಜಿಸಿ, ಲಂಡನಿಗೆ ಬಂದಳು.

ಟವರಿಗೆ ಹೋಗಿ, ಪತಿಯನ್ನು ಕಂಡು ಮಾತಾಡೋಣವೆಂದರೆ, ಟವರಿನ ಗವರ್ನರನು, "ನೀನು ಬಂಧಿಯಾಗಿಯೇ ಅಲ್ಲಿ ಉಳಿಯುವುದಾದರೆ

ಮಾತ್ರ ಟವರಿಗೆ ಹೋಗಗೊಡಬಹುದು" ಎಂದನು. ಹೇಗಿದ್ದರೂ, ಆಗ ಅವಳು ಅಲ್ಲಿಗೆ ಹೋಗಿ ಅವನಿಗೆ ಯಾವ ತರದ ಸಹಾಯ ಕೊಡುವಂತೆಯೂ ಇರಲಿಲ್ಲ. ಅವಳು ಯೋಚಿಸಿ, ಕಾವಲುಗಾರರಿಗೆ ಲಂಚಕೊಟ್ಟು, ಯಾರಿಗೂ ಅರಿಯದಂತೆ ಪ್ರತಿ ದಿನ ಟವರಿಗೆ ಹೋಗಿ ತನ್ನ ಪತಿಯನ್ನು ಕಂಡು ಮಾತಾಡಿ ಬರುತಿದ್ದಳು.

ಗಂಡನಿಗೆ ಕ್ಷಮೆ ದೊರಕಿಸಿಕೊಳ್ಳುವ ಅವಳ ಯತ್ನವು ವಿಫಲ ವಾಯಿತು. ಅವನನ್ನು ಗಲ್ಲಿಗೇರಿಸುವ ದಿನವು ಸಮೀಪಿಸಿತು. ಆ ವೀರ ನಾರಿಯು, ಒಂದು ದಿನ ಮುಂಚಿತವಾಗಿ ಅವನನ್ನು ಟವರಿನಿಂದ ಬಿಡಿಸಿ ಕೊಂಡು ಹೋಗುವ ಆಲೋಚನೆ ಮಾಡಿದಳು.

ಮರಣದಂಡನೆಯ ಮುಂಚಿನ ದಿನ, ಸಾಯಂಕಾಲ, ನಿಥ್ಸಡೇಲನ ಪತ್ನಿಯು, ತನ್ನ ಇಬ್ಬರು ಗೆಳತಿಯರನ್ನು ಕರೆದುಕೊಂಡು ಟವರಿಗೆ ಹೋದಳು.

ಅವರಲ್ಲೊಬ್ಬಳು ಒಂದು ಪೋಷಾಕನ್ನು ಅಡಗಿಸಿ ತಂದಿದ್ದಳು. ಎರಡನೇ ಗೆಳತಿಯು ತನ್ನ ಪೋಷಾಕನ್ನು ಕಳಚಿ, ಅರ್ಲ್ ನಿಥ್ಸಡೇಲನಿಗೆ ಕೊಟ್ಟಳು; ಮತ್ತು, ಮೊದಲನೆಯವಳು ಅಡಗಿಸಿ ತಂದ ಪೋಷಾಕನ್ನು ತಾನು ಹಾಕಿಕೊಂಡಳು.

ಮೊದಲನೆಯವಳು ಹೊರಟುಹೋದಳು. ಎರಡನೆಯವಳು ಒಳಗೆ ಬರುವಾಗ ಅಳುತ್ತಳುತ್ತ, ಮುಖಕ್ಕೆ ಕರವಸ್ತ್ರ ಹಿಡಿದು ಬರಬೇಕೆಂದು ಗೊತ್ತಾಗಿತ್ತು. ನಿಥ್ಸಡೇಲನು ಅವಳ ಪೋಷಾಕು ಧರಿಸಿ, ತಲೆಮುಚ್ಚಿ ಕೊಂಡು, ಮುಖದ ಗಡ್ಡ ಕಾಣದಂತೆ ಕರವಸ್ತ್ರ ಹಿಡಿದು ಅಳುತ್ತಿರುವ ನಟನೆಯಿಂದ ಹೊರಗೆ ಹೋದನು; ನಿಥ್ಸಡೇಲನ ಪತ್ನಿಯು, ಅವನ ನಡಿಗೆಯ ಗುರುತು ಕಾವಲುಗಾರರಿಗೆ ಹತ್ತಬಾರದೆಂದು, ಒತ್ತಿಯೇ ಹಿಂದೆ ಹಿಂದೆ ಕೆಲವಂತರ ಬಂದು, ತನ್ನ ಗೆಳತಿಯೊಬ್ಬಳನ್ನು ಬೀಳ್ಕೊಟ್ಟ ನಟನೆ ಮಾಡಿದಳು, ಮತ್ತು ಅವಳ ಗೆಳತಿಯ ವೇಷದಲ್ಲಿರುವ ನಿಥ್ಸಡೇಲನು ಆಚೆ ಹೋದ ನಂತರ ತಾನು ಒಳಗೆ ಬಂದು, "ನನ್ನ ಕೆಲಸದವಳೊಬ್ಬಳನ್ನು ಕರೆದು ತಾ" ಎಂದು, ಒಳಗೆ ಉಳಿದ ಇನ್ನೊಬ್ಬ ಗೆಳತಿಗೆ (ತನ್ನ ಪೋಷಾಕನ್ನು ನಿಥ್ಸಡೇಲನಿಗೆ ಕೊಟ್ಟಾಕೆಗೆ) ಹೇಳಿದಳು. ಮೊದಲನೆಯವಳು ತಂದುಕೊಟ್ಟಿದ್ದ ಪೋಷಾಕನ್ನು ಧರಿಸಿದ ಈ ಎರಡನೆಯವಳು, ಕೂಡಲೇ, ಸೇವಕಿಯನ್ನು ಕರೆವೆನೆಂದು ತಾನು ಹೊರಗೆ ನಡೆದುಬಿಟ್ಟಳು.

ಒಳಗೆ, ನಿಥ್ಸಡೇಲನ ಪತ್ನಿಯೊಬ್ಬಳೇ ಉಳಿದಳು. ಅವಳು, ತನ್ನ ಪತಿಯೊಡನೆ ಗಟ್ಟಿಯಾಗಿ ಸಂಭಾಷಿಸುತ್ತಿರುವಂತೆ—ಊಹನೆಯ ಸಂಭಾಷಣೆಯಲ್ಲಿ ತೊಡಗಿದಳು. ತನ್ನ ಪತಿಯ ಸ್ವರವನ್ನೂ ಬಲು ವೇಟ್ಟಿಗೆ ತಾನೇ ನಟಿಸಿದಳು. ತನ್ನ ಇಬ್ಬರು ಗೆಳತಿಯರೂ ಪತಿಯೂ ಸಾಕಷ್ಟು ದೂರಕ್ಕೆ ತಲಪುವ ವರೆಗೆ ಈ ನಟನೆ ಮಾಡಿ, ಆ ಮೇಲೆ ಹೊರಗೆ ಬರುತ್ತ, ಬಾಗಿಲಲ್ಲಿ ನಿಂತು ತನ್ನ ಪತಿಗೆ ಕೊನೆಯ ವಿದಾಯ ಹೇಳಿದಂತೆ ನಟಿಸಿ, ಬಾಗಿಲಿಕ್ಕಿ ಕೊಂಡು, "ಒಳಗೆ ದೀಪಗೀಪ ಏನೂ ತೆಗೆದುಕೊಂಡು ಹೋಗುವುದವಶ್ಯವಿಲ್ಲ. ಅವರು (ತನ್ನ ಪತಿ) ದುಃಖದಲ್ಲಿದ್ದಾರೆ, ಕತ್ತಲಲ್ಲೇ ಇರಲಪೇಕ್ಷಿಸುತ್ತಾರೆ" ಎಂಬರ್ಥಸೂಚಕ ಮಾತುಗಳನ್ನಾಡಿ, ಟವರಿನಿಂದ ಬಂದು, ಗಾಡಿಯಲ್ಲಿ ಕುಳಿತು ಹೋಗಿಬಿಟ್ಟಳು.

ನಿಥ್ಸಡೇಲನು ಫ್ರಾನ್ಸಿಗೆ ಓಡುವಂತೆ ಮೊದಲೇ, ಗುಪ್ತಸಿದ್ಧತೆಗಳಾಗಿದ್ದುವು.

ಅರಸನಿಗೆ, ನಿಥ್ಸಡೇಲನು ತಪ್ಪಿಸಿ ಓಡಿದ ಸುದ್ದಿ ತಲಪುತ್ತಲೇ ಕ್ರೋಧದಿಂದ ಕಿಡಿಕಿಡಿಯಾದನು. ನಿಥ್ಸಡೇಲನನ್ನೂ ಅವನ ಪತ್ನಿಯನ್ನೂ ಹಿಡಿದು ತರಲು ನಾಲ್ಕೆಡೆಗಳಿಗೂ ಸೈನಿಕರನ್ನು ಅಟ್ಟಿದನು. ಆದರೆ, ಜಾಣೆಯಾದ ಆಕೆ, ಸ್ಕೊಟ್ಲೆಂಡಿನಿಂದ ತನ್ನ ಮಗನನ್ನೂ ಕರೆಸಿಕೊಂಡು, ಪೆರಿಸಿಗೆ ಓಡಿ, ತನ್ನ ಪತಿಯನ್ನು ಸೇರಿದಳು. ಇತಿಹಾಸದಲ್ಲಿ ಸ್ತ್ರೀಯರ ಸಾಹಸ ಕೃತ್ಯಗಳಲ್ಲಿ ಇಂಥ ಘಟನೆಗಳು ಅಪರೂಪ.

ನಿಥ್ಸಡೇಲನು ಅಂದು ತಲೆಮರೆಸಿ ಓಡುವಾಗ ಉಪಯೋಗಿಸಿದ್ದ ಶಾಲನ್ನು, ಅವನ ವಂಶದವರು ಇಂದಿಗೂ ಜೋಪಾನವಾಗಿರಿಸಿಕೊಂಡಿರುವರು.

೪. ಪ್ರಾಮಾಣಿಕ ಬಾಲಕ

ಕ್ರಿ. ಶ. ೧೮೭೧ನೇ ಇಸವಿ. ಪೆರಿಸ್ ನಗರದಲ್ಲಿ, "ಕಮ್ಯೂನ್" ಗಲಭೆಗಳು ನಡೆದಿದ್ದುವು. ಫ್ರಾನ್ಸಿನ ಭಯಂಕರ ದಿನಗಳಲ್ಲಿ, ಆ ಕಾಲದ ಅರಾಜಕತೆಯ ಭೀಕರತೆಯು ಅಸಾಧಾರಣವಾಗಿತ್ತು. ನಗರದ ರಸ್ತೆಗಳಲ್ಲಿ ಗುಂಡುಗಳು ಹಾರುತಿದ್ದುವು. ಶಾಂತಜನರು ಭಯಗೊಂಡು ಮನೆಗಳಲ್ಲೇ ಅವಿತಿದ್ದರು. ರಸ್ತೆಗಳಲ್ಲಿ ನಡೆವುದು ಅಪಾಯಕರವಾಗಿತ್ತು.

ಪೆರಿಸ್ ನಗರದಲ್ಲಿ ಎಡ್ವರ್ಡ್ ಮೆಲ್ಲೆಟ್‌ರವರು ಬ್ರಿಟಿಷ್ ರಾಯಭಾರಿಯಾಗಿದ್ದರು. ಮೆಲ್ಲೆಟ್‌ರವರು ಒಂದು ದಿನ, ತಮ್ಮ ಕಚೇರಿಯೊಳಗೆ ನಡೆದು ಹೋಗುತ್ತ, ಒಂದು ಕಿಟಕಿಯಿಂದ ಹೊರಗೆ ಇಣಿಕಿ ನೋಡಲು, ಒಬ್ಬ ಚಿಕ್ಕ ಕೃಶ ಬಾಲಕನು ಕೆಳಗೆ ನಿಂತು, ಅವರ ಕಚೇರಿ ಕಿಟಕಿಗಳ ಕಡೆಗೆ, ಕರುಣೆ ಹುಟ್ಟಿಸುವಂತೆ ಆತುರದಿಂದ ದೃಷ್ಟಿಸುತ್ತಿದ್ದುದನ್ನು ಕಂಡರು. ತುಸು ಹೊತ್ತಿನ ಮೇಲೆ, ತಿರಿಗಿ ಆ ಕಿಟಿಕಿಬಳಿಯಿಂದ ಹೋಗುವಾಗಲೂ, ಆ ಹುಡುಗನು ಅಲ್ಲೇ ನಿಂತುಕೊಂಡು ನೋಡುತಿದ್ದನು! ರಾಯಭಾರಿ ಕಚೇರಿಯ ಅಂಗಳದಲ್ಲಿ ಈ ಚಿಕ್ಕ ಬಾಲಕನು ಇಷ್ಟು ಹೊತ್ತು ಏಕೆ ನಿಂತುಕೊಂಡಿರುವನೆಂದು ತಿಳಿವ ಕುತೂಹಲದಿಂದ ಮೆಲ್ಲೆಟ್‌ರವರು, ವಿಚಾರಿಸಿಕೊಂಡು ಬರುವಂತೆ ತಮ್ಮ ಕಾರ್ಯದರ್ಶಿಗಳಿಗೆ ತಿಳಿಸಿದರು.

ಕಾರ್ಯದರ್ಶಿಯು ವಿಚಾರಿಸಿಕೊಂಡು ಬಂದನು. ರಾಯಭಾರಿಯೊಡನೇ ತನಗೇನೋ ಹೇಳಲಿದೆಯೆಂದೂ, ಇತರರೊಡನೆ ಆ ವಿಷಯವನ್ನು ತಿಳಿಸಬಾರದೆಂದೂ ಹುಡುಗನು ಹೇಳಿಕೊಂಡು, ನಿಂತಿದ್ದನು. ರಾಯಭಾರಿಯು ಆ ಹುಡುಗನನ್ನು ತನ್ನ ಕೊಠಡಿಗೆ ಬರಮಾಡಿಕೊಂಡನು.

ಹುಡುಗನ ವಯಸ್ಸು ಸುಮಾರು ಎಂಟು ವರ್ಷಗಳಾಗಿರಬಹುದು. ಚೊಕ್ಕವಾದ ಪೋಷಾಕು ಧರಿಸಿದ್ದನು. ಅಧೀರನಾಗದೆ, ಸ್ವಸ್ಥಚಿತ್ತದಿಂದಿರುವವನಂತೆ ಕಂಡನು. ನ್ಯಾಯಸ್ಥರ ನಡೆನುಡಿಗಳುಳ್ಳವನಂತೆ ತೋರುತಿದ್ದನು. ಮೆಲ್ಲೆಟ್‌ರವರ ಕುತೂಹಲವು ಕೆರಳಿ, ಸಮಾಚಾರವೇನೆಂದು ಹುಡುಗನೊಡನೆ ಪ್ರಶ್ನಿಸಿದರು.

ಹುಡುಗನು ತನ್ನ ಕಥೆಯನ್ನು ವಿವರಿಸಿದನು. 'ಅವನೂ ಅವನ ತಾಯಿಯೂ, ಇಬ್ಬರು ಸೇವಕಿಯರೊಂದಿಗೆ, ಆ ನಗರದಲ್ಲೊಂದು ಕಡೆ ವಾಸವಾಗಿದ್ದರು—ಅವನು ತನ್ನ ತಾಯಿಯ ಆರೈಕೆ-ರಕ್ಷಣೆಯ ಭಾರ ವಹಿಸಿದ್ದನು—ಸೇವಕಿಯರು ಪ್ರಯೋಜನವಿಲ್ಲದ, ಗಾಬರಿಗೊಳ್ಳುವ ಜೀವಿಗಳಾಗಿದ್ದರು—ಅವರಿದ್ದ ರಸ್ತೆಗಳಲ್ಲಿ ಬಂದೂಕುಗಳು ಹಾರುತಿದ್ದುವು, ಹೋರಾಟ ನಡೆದಿತ್ತು—ಅವನು ತನ್ನ ತಾಯಿಯನ್ನು ಸುರಕ್ಷಿತ ಸ್ಥಳವೊಂದಕ್ಕೆ ಕರೆದೊಯ್ಯಬೇಕಾಗಿತ್ತು, ಆದರೆ ಅವನೊಡನೆ ಆ ಬಗ್ಗೆ ಹಣವಿರಲಿಲ್ಲ—ರಾಯಭಾರಿಯು ಇಪ್ಪತ್ತು ಪವನುಗಳನ್ನು ಕೈಸಾಲವಾಗಿ ಕೊಡಬಲ್ಲರೆ? ಅಂಚೆಮನೆಗಳು ತಿರಿಗಿ ಕ್ರಮವಾಗಿ ಕೆಲಸವನ್ನಾರಂಭಿಸುತ್ತಲೇ ತಾನು ಆ ಹಣವನ್ನು ಮರುಪಾವತಿ ಮಾಡುವೆನು.'

ಹುಡುಗನು, ಈ ಸಾಲವೆತ್ತುವ ವಿಷಯುವನ್ನು ತನ್ನ ತಾಯಿಗೆ ತಿಳಿಸದೆ ಬಂದಿದ್ದನು. ರಾಯುಭಾರಿಗೆ ಆಶ್ಚರ್ಯವಾಯಿತು. ಹಲವು ಪ್ರಶ್ನೆಗಳ ನಂತರ,ಈ ಬಾಲಕನನ್ನು ನಂಬಿನೋಡೋಣವೆಂದು ಮೆಲ್ಲೆಟ್‌ರವರು ಇಪ್ಪತ್ತು ಪವನುಗಳನ್ನು ಕೊಟ್ಟರು. ಹುಡುಗನು, ಪ್ರಾಯುಪ್ರಬುದ್ಧನಂತೇ ಮಾತಾಡಿ, ವಂದಿಸಿ, ಅಲ್ಲಿಂದ ಹೊರಟುಹೋದನು. ಮೆಲ್ಲೆಟ್‌ರವರು ಈ ವಿಷಯುವನ್ನು ಮರೆತುಬಿಟ್ಟರು.

ಕೆಲಕಾಲದೊಳಗೇ ನಗರದಲ್ಲಿ ಶಾಂತಿ ನೆಲೆಸಿತು. ಆ ಹುಡುಗನು ರಾಯುಭಾರಿಯು ಕಚೇರಿಗೆ ಬಂದನು. ಅವನನ್ನು ನೋಡಿ, ಮೆಲ್ಲೆಟ್‌ರವರಿಗೆ ಚೋದ್ಯವೆನಿಸಿತು. ಹುಡುಗನು, ಈ ಕೆಳಗಿನಂತೆ ವಿವರಕೊಟ್ಟನು:

"ನಾವು, ಅಪಾಯುವನ್ನು ತಪ್ಪಿಸಲೆಂದು ಹೋದ ಪಟ್ಟಣವು ಇನ್ನಷ್ಟು ಅಪಾಯುಕರವಾಗಿದೆ. ಅಲ್ಲಿ ನಮ್ಮ ಕಿಟಕಿ ಮೇಲೂ ನೆತ್ತರು ಚೆಲ್ಲಲ್ಪಟ್ಟಿದೆ. ನನ್ನ ತಾಯಿ ಇದನ್ನು ಸಹಿಸಲಾರಳು. ಗೋಲಿ ತಗಲಬಹುದೆಂದು ನಾವು ಮನೆಯು ಹೊರಗೆ ಹೋಗಿಲ್ಲ. ಆಹಾರವಿಲ್ಲದೆನೇ ಸಮಯು ಕಳೆದುದುಂಟು. ನನ್ನ ತಾಯಿಯುನ್ನು ದೂರಕ್ಕೊಯ್ಯಬೇಕೆಂದು ನಿಶ್ಚಯಿಸಿದ್ದೇನೆ. ಅಲ್ಲಿ ಅವಳು ಶಾಂತಳಾಗಿ, ಸೌಖ್ಯ ಹೊಂದುವಳೆಂದು ನನಗನಿಸುತ್ತದೆ. ನಾನು ಎಲ್ಲ ವ್ಯವಸ್ಥೆಯುನ್ನೂ ಮಾಡಿರುತ್ತೇನೆ........ ನಿಮ್ಮ ಹಣವನ್ನು ತಂದಿದ್ದೇನೆ"—ಎನ್ನುತ್ತ, ಕಿಸೆಯಿಂದ ಇಪ್ಪತ್ತು ಪವನುಗಳನ್ನು ಲೆಕ್ಕಮಾಡಿ ಮುಂದಿರಿಸಿ, "ನಿಮಗೆ ವಂದನೆಗಳು. ನೀವು ಮಾಡಿದ ಉಪಕಾರಕ್ಕಾಗಿ ಕೃತಜ್ಞತೆ ಸೂಚಿಸಲು ತಾಯಿ ಹೇಳಿರುವರು"—ಹೀಗೆ ಹೇಳಿ ಬಾಲಕನು, ಹೊರಟು ಹೋದನು.

ಕಥೆಯೇನೋ ಚಿಕ್ಕದು. ಆದರೆ, ಈ ಕಥೆಯು ಉದ್ಬೋಧಕವಿದೆ. ತನ್ನ ಅಸ್ವಸ್ಥದ ತಾಯಿ ಮತ್ತು ಇಬ್ಬರು ಸೇವಕಿಯುರೊಂದಿಗೆ ವಾಸಿಸಿದ್ದ ಈ ಪುಟ್ಟ ಬಾಲಕನು, ಪ್ರಾಯುಪ್ರಬುದ್ಧರ ಧೀರತೆ ಮತ್ತು ಸ್ಥೈರ್ಯವನ್ನು ತಂದುಕೊಂಡು, ಆಪತ್ಕಾಲದಲ್ಲಿ ತಾನು ಆ ಮೂವರು ಸ್ತ್ರೀಯುರ ರಕ್ಷಕನೆಂದು ತಿಳಿದು, ಆಶ್ಚರ್ಯಕರ ರೀತಿಯುಲ್ಲಿ ನಡಕೊಂಡಿದ್ದನು. ಅತಿ ಚಿಕ್ಕ ಪ್ರಾಯುದವರಾದರೂ, ಜವಾಬ್ದಾರಿ ವಹಿಸಿ ಧೀರತೆ ತೋರಬಲ್ಲರೆಂಬುದಕ್ಕೆ ಈ ಕಥೆಯೊಂದು ಉದಾಹರಣೆಯಾಗಿದೆ.

■■■■■■■■■

೫. ನೋಯೊನ್ ನಗರದ ಧೀರೆ

ಫ್ರಾನ್ಸಿನ ನೊಯೊನ್ ನಗರದ ಭೂಗತ ಚರಂಡಿಗಳಲ್ಲಿ, ಯಾವುದೋ ಅಕ್ರಮದಿಂದ, ಕೊಳೆ ಕೆಸರುಗಳು ಹರಿದುಹೋಗದೆ ತುಂಬಿ ನಿಂತಿದ್ದುವು. ಕೆಲಸಗಾರರು ಅಲ್ಲಿಗೆ ಕಳಿಸಲ್ಪಟ್ಟರು. ಅವರು, ಅಸಾಧ್ಯ ದುರ್ವಾಸನೆಯ ಆ 'ನರಕ ಲೋಕ'ಕ್ಕೆ ಇಳಿದು ಹೋಗಿ, ಅದನ್ನು ಸ್ವಚ್ಛಪಡಿಸತೊಡಗಿದರು.

ಒಂದು ರಸ್ತೆಯ ಇಂಥ ಚರಂಡಿಯಲ್ಲಿ ನಾಲ್ವರು ಕೆಲಸಗಾರರು ಇಳಿದಿದ್ದರು. ಅವರು ಕೆಲಸದಲ್ಲಿ ತೊಡಗಿದ್ದಾಗ, ಆ ಹೊಲಸಿನಿಂದ ಹೊರಡುವ ವಿಷವಾಯುವಿನಿಂದ ಧೃತಿ ತಪ್ಪಿದರು. ತಮ್ಮನ್ನು ಮೇಲಕ್ಕೆ ಎಳೆಯಬೇಕೆಂಬ ಸಂಜ್ಞೆ ಕೊಡದಾದರು.

ಅವರೇಕೆ ಮೇಲೆ ಬಂದಿಲ್ಲ—ಏನಾಗಿರಬಹುದು—ಎಂದು ತಿಳಿಯದೆ, ಬಳಿಯ ಮನೆಯವರು ಗಾಬರಿಗೊಂಡರು. ಆದರೆ, ಯಾರೂ ಅಲ್ಲಿ ಕೆಳಗಿಳಿದು ನೋಡಲು ಧೈರ್ಯಪಡಲಿಲ್ಲ.

ಸುಮಾರು ಹದಿನೇಳು ವರ್ಷ ಪ್ರಾಯದ ಹುಡುಗಿಯೊಬ್ಬಳು ಆ ಮನೆಯಲ್ಲಿ ಕೆಲಸಕ್ಕಿದ್ದಳು. ತನ್ನನ್ನು ಒಂದು ಹಗ್ಗಕ್ಕೆ ಕಟ್ಟಿ ಕೆಳಗಿಳಿಸಬೇಕೆಂದು ಬೇಡಿಕೊಂಡಳು. ಕೊನೆಗೆ ಅವಳನ್ನು ಇಳಿಸಿದರು.

ಆ ಗಟಾರಿನ ಅಡಿಯಲ್ಲಿ ನಾಲ್ವರು ಕೆಲಸಗಾರರೂ ನಿಶ್ಚೇಷ್ಟಿತರಾಗಿ ಬಿದ್ದುಕೊಂಡಿದ್ದರು. ನಡುಗುವ ಕೈಗಳಿಂದ ಆ ಬಾಲೆಯು ಒಬ್ಬನನ್ನು ಹಗ್ಗಕ್ಕೆ ಬಿಗಿದಳು, ಮತ್ತು ಮೇಲಕ್ಕೆಳೆಯುವಂತೆ ಸಂಜ್ಞೆಮಾಡಿದಳು. ಮೇಲೆ ಆತುರದಿಂದ ನಿಂತು ಕಾಯುತ್ತಿದ್ದವರು, ಹಗ್ಗವನ್ನು ಬಲವಾಗಿ ಅಲ್ಲಾಡಿಸಿ ಕೊಟ್ಟ ಸಂಜ್ಞೆ ತಿಳಿದು, ಎಳೆದರು; ಮೂರ್ಛೆಗೊಂಡಿದ್ದ ಆ ಕೆಲಸಗಾರನು ಬದುಕುವ ಆಸೆಯಿತ್ತು.

ಎರಡನೇ ಬಾರಿ ಇನ್ನೊಬ್ಬನನ್ನು ಅದೇ ರೀತಿ ಕಟ್ಟಿ ಮೇಲಕ್ಕೆಳೆವಂತೆ ಸಂಜ್ಞೆಮಾಡಿದಳು. ಅವನೂ, ಸುರಕ್ಷಿತವಾಗಿ ಮೇಲಕ್ಕೆಳೆಯಲ್ಪಟ್ಟನು.

ಮೂರನೇ ಬಾರಿ ಹಗ್ಗವು ಕೆಳಗಿಳಿಸಲ್ಪಟ್ಟಾಗ, ದುರ್ವಾಸನೆಯ ವಿಷವಾಯುವಿನಿಂದ ಹುಡುಗಿ, ತಾನೇ ಮೂರ್ಛೆ ಹೋಗುವ ಸ್ಥಿತಿಗೆ ತಲುಪಿದ್ದಳು. ಪ್ರಯತ್ನಪೂರ್ವಕವಾಗಿ ಆ ಮೂರನೆಯವನನ್ನೂ ಕಟ್ಟಿ, ತನ್ನ ಕೂದಲುಗಳನ್ನೂ ಆ ಹಗ್ಗಕ್ಕೆ ಬಿಗಿದುಕೊಂಡಳು.

ಮೇಲೆ ನಿಂತವರು, ಈಗ ಎರಡು ದೇಹಗಳನ್ನು ಎಳೆವಾಗ ಬಹಳ ಜಾಗರೂಕತೆ ವಹಿಸಬೇಕಾಯಿತು. ಸುದೈವದಿಂದ ಹಗ್ಗವೂ ಕಡಿದು ಹೋಗದೆ, ಮೂರನೇ ಕೆಲಸಗಾರನೂ ಆ ಹುಡುಗಿಯೂ ಮೇಲಕ್ಕೆ ಎಳೆಯಲ್ಪಟ್ಟರು.

ಶುದ್ಧ ಗಾಳಿಯು ತಗಲಿ ಬಾಲೆ ಎಚ್ಚರಗೊಂಡಳು. ನಾಲ್ಕನೆಯವನು ಗಟಾರಿನಲ್ಲಿ ಇದ್ದನು. ತಾನು ಪುನಃ ಕೆಳಗಿಳಿದು ಅವನನ್ನೂ ಬದುಕಿಸುವೆನೆಂದು ಹಟತೊಟ್ಟು, ಹಗ್ಗಕ್ಕೆ ಕಟ್ಟಿಕೊಂಡು, ಕೆಳಗಿಳಿಸಿಕೊಂಡಳು. ಆ ನಾಲ್ಕನೆಯವನೂ ಮೇಲಕ್ಕೆಳೆಯಲ್ಪಟ್ಟನು. ಆದರೆ, ಅವಳ ಆ ಯತ್ನವು ಮಾತ್ರ ವಿಫಲಗೊಂಡಿತು. ಹೊತ್ತು ಮೀರಿದ್ದರಿಂದ ಅವನು ಗತಪ್ರಾಣನಾಗಿದ್ದನು.

ಫ್ರೆಂಚರು ಧೀರ ಗುಣಗಳನ್ನು ಗೌರವಿಸಲು ಅರಿತವರು. ಆ ಬಾಲಿಕೆಗೆ ನಾಲ್ಕು ಕಡೆಗಳಿಂದ ಉಪಹಾರಗಳು ಬಂದುಬಿದ್ದುವು. ಅವಳು, ಇತರರ ಪ್ರಾಣಗಳನ್ನು ರಕ್ಷಿಸಲು, ತನ್ನದನ್ನು ಅಪಾಯಕ್ಕೊಡ್ಡಿದ್ದಳು!

೬. ಪ್ರಾಣದಾನದ ಇನ್ನೊಂದು ಕಥೆ

ಲಾಬಾತ್ ನಾಮಾಂಕಿತ ಫ್ರೆಂಚ್ ಸಾಹುಕಾರನೊಬ್ಬನು, ಅಸ್ವಸ್ಥ ಬಿದ್ದು, ಹವಾ ಬದಲಾವಣೆಗಾಗಿ, ಅಡೌರ್ ನದೀ ತೀರದ ಮೇಲಿರುವ ಒಂದು ಮನೋಹರ ಬಂಗಲೆಯನ್ನು ಕೊಂಡುಕೊಂಡು, ಅಲ್ಲಿ ಹೋಗಿ ವಾಸ ಮಾಡಲು ತೊಡಗಿದನು.

ಒಂದು ದಿನ ಬೆಳಿಗ್ಗೆ, ಅವನು ಹೊರ ಪ್ರದೇಶದಲ್ಲಿ ತಿರುಗಾಡುತ್ತಿರುವಾಗ, ಎದುರು ದಂಡೆಯಲ್ಲಿ, ದೂರದಲ್ಲೊಬ್ಬ ಅಶ್ವಾರೋಹಿಯು, ಕುಪಿತ ಅಶ್ವವನ್ನು ಹತೋಟಿಗೆ ತರಲು ಚಡಪಡಿಸುವುದನ್ನು ಕಂಡನು. ಈ ಭಯಾನಕ ಕದನವನ್ನು ನೋಡುತ್ತಿದ್ದಂತೆ, ಕುದುರೆಯು ಕೆಳಗೆ ನದಿಗೆ ಬಿದ್ದು ಬಿಟ್ಟುದನ್ನೂ, ಸವಾರನು ನೀರಿಗೆಸೆಯಲ್ಪಟ್ಟುದನ್ನೂ ಕಂಡನು

ಅಸ್ವಸ್ಥನಿದ್ದರೂ ಆ ಸಾಹುಕಾರನು, ಒಂದು ಕ್ಷಣವೂ ತಡೆದುಕೊಳ್ಳಲಿಲ್ಲ. ತನ್ನ ವಯಸ್ಸನ್ನೂ ಜೀವವನ್ನೂ ಲಕ್ಷಿಸದೆ, ಮುಂದೆ ಓಡಿ, ನದಿಗೆ ಹಾರಿದನು.

ಅವನಿಗೆ ಚೆನ್ನಾಗಿ ಈಜು ಬರುತ್ತಿತ್ತು. ಈಜುತ್ತ ಈಜುತ್ತ, ನದಿಯಲ್ಲಿ ಚಡಪಡಿಸುತ್ತಿದ್ದ ಆ ಸವಾರನ ಬಳಿಗೆ ತಲಪಿದನು. ಸವಾರನು ಪೋಷಾಕು ಧರಿಸಿದ್ದು, ಭಾರದ 'ಬೂಟ್ಸ್'ಗಳನ್ನೂ ಹಾಕಿಕೊಂಡಿದ್ದವನು. ಅವನನ್ನು ಸೀರಿಸಿಂದೆಳೆದು ಸುರಕ್ಷಿತವಾಗಿ ದಡಕ್ಕೆ ಮುಟ್ಟಿಸುವುದು ಸುಲಭ ಸಾಧ್ಯವಾಗಿರಲಿಲ್ಲ. ಆದರೂ, ಭಯಂಕರ ರೀತಿಯ ಒದ್ದಾಟದ ಮೇಲೆ, ಹೇಗೂ ಅವನನ್ನು ದಡಕ್ಕೆ ತಂದನು.

ತಾನು ಯಾರನ್ನು ರಕ್ಷಿಸಿದ್ದೇನೋ ಅವನ ಮುಖದ ಮೇಲೆ ದೃಷ್ಟಿ ಬೀರಲಾಗಿ, ಆ ಸಾಹುಕಾರನ ಬಾಯಿಯಿಂದ ಈ ಉದ್ಗಾರವು ಹೊರಟಿತು: "ಭಗವಂತ! ನೀನೆಷ್ಟು ದಯಾಮಯ! ನನ್ನ ಆನಂದವನ್ನು ಇಂದು ದ್ವಿಗುಣಿತವಾಗಿ ಮಾಡಿದೆ!"

ರಕ್ಷಿಸಲ್ಪಟ್ಟವನು, ಆ ಸಾಹುಕಾರನ ಮಗನಾಗಿದ್ದನು!

೭. ಮೆಡಲೀನ್

ಸುಮಾರು ನೂರು ವರ್ಷಗಳ ಹಿಂದೆ, ಬೆರನ್ ಡಿ ಮೊಂಥ್ಯಾಯನ ಎಂಬ ಹೆಸರಿನ ಶ್ರೀಮಂತ ವಕೀಲನೊಬ್ಬನು, "ವರುಷದಲ್ಲಿ ಅತೀ ಮಹತ್ವದ ಪುಣ್ಯಕಾರ್ಯ ಮಾಡಿದ ಫ್ರೆಂಚ್ ಪ್ರಜೆಗೆ ಬಹುಮಾನ ಕೊಡುವ" ಸಲುವಾಗಿ ಹೇರಳ ಧನವನ್ನು ಪ್ರತ್ಯೇಕಿಸಿಟ್ಟನು. ಆ ಬಹುಮಾನವನ್ನು ಪಡೆದವರ ದಾಖಲೆಯು, ಸ್ವರ್ಣಾಕ್ಷರಗಳಲ್ಲಿ ಬರೆಯಿಡಲ್ಪಡುವಂತೆ— ಮಾನಸಿಕೀಯತೆ, ಧೈರ್ಯ, ತ್ಯಾಗಗಳ ಚರಿತ್ರಗಳನ್ನು ಲೋಕದ ಮುಂದೆ ಅನಾವರಣಗೊಳಿಸುತ್ತಿವೆ. ಆ ಬಹುಮಾನ ಪಡೆದವರಲ್ಲಿ, ಮೆಡಲೀನ್ ಸೌನಿಯ ಎಂಬವಳ ಹೆಸರು ಪ್ರಥಮಶ್ರೇಣಿಯಲ್ಲಿದೆ.

ಮೆಡಲೀನ್ ಸೌನಿಯಳು ತರುಣ ಮಹಿಳೆ. ಅವಳು ತನ್ನ ಜೀವಮಾನವನ್ನೆಲ್ಲ, ಸಾವು-ನೋವುಗಳಲ್ಲಿ ತೊಳಲಾಡುವ ಬಡವರ ಬಗ್ಗೆ ಮೀಸಲಾಗಿಟ್ಟಿದ್ದಳು. ಅವಳ ಈ ಸೇವೆಗಳಲ್ಲಿ ಒಂದೆರಡನ್ನು ಇಲ್ಲಿ ಆರಿಸಿ ಕೊಡಲಾಗಿದೆ.

ಓರ್ವ ಅಂಧ ವಿಧವೆಯು, ತನ್ನ ಬಡಪಾಯಿ ಮಗಳೊಂದಿಗೆ, ಮೆಡಲೀನ್ ಸೌನಿಯಳ ಮನೆಯಿಂದ ಸುಮಾರು ಒಂದೂವರೆ ಮೈಲು ದೂರದಲ್ಲಿ ವಾಸಿಸಿದ್ದಳು. ಮೆಡಲೀನಳು, ಹದಿನೈದು ವರ್ಷಗಳ ತನಕ

ಪ್ರತಿಯೊಂದು ದಿನ ಆ ಬಡ ಕುರುಡಿಯು ಗುಡಿಸಲಿಗೆ ಹೋಗಿ, ಮನೆಗೆಲಸಗಳನ್ನು ಮಾಡಿಕೊಟ್ಟು, ಅವರಿಗೆ ಉತ್ಸಾಹದ ನಾಲ್ಕು ಮಾತುಗಳಿಂದ ಸಂತೋಷಪಡಿಸುತಿದ್ದಳು. ಮೆಡಲೀನಳ ಆಗಮನವನ್ನವರು ನಿತ್ಯವೂ ಆತುರದಿಂದ ಕಾಯುತಿದ್ದರು.

ಅಲ್ಲಿಂದ ಒಂದು ಮೈಲು ದೂರದಲ್ಲಿ, ಇನ್ನೊಂದು ಗುಡಿಸಲಿನಲ್ಲಿ, ಓರ್ವ ಹುಡುಗಿಯು ಕುಷ್ಠರೋಗಪೀಡಿತಳಾಗಿ ನರಳುತಿದ್ದಳು. ಆವಳನ್ನು ಎಲ್ಲ ಬಂಧುಬಾಂಧವರು ಕೈಬಿಟ್ಟಿದ್ದರು. ಮೆಡಲೀನಳು ಆ ಏಕಾಕಿ—ಕುಷ್ಠರೋಗೀ ಬಾಲಿಕೆಯ ಬಳಿಗೆ ನಿತ್ಯವೂ ಹೋಗಿ, ಅವಳಿಗೆ ಆಹಾರ ಪಾನೀಯಗಳನ್ನು ಒದಗಿಸಿ, ಆ[illegible]ಯ್ಯಗೆ ಲೇಪಗಳನ್ನು ಹಚ್ಚಿ, ಹುಣ್ಣುಗಳಿಗೆ ವಸ್ತ್ರಸುತ್ತಿ, ನಗುಮೊಗದಿಂದ ಆವಳನ್ನು ಸವಿಮಾತುಗಳಲ್ಲಿ ದುಃಖ ಮರೆವಂತೆ ಮಾಡಿ ಬರುತಿದ್ದಳು. ದಿನಕ್ಕೆ ಎರಡುಬಾರಿ ಮೆಡಲೀನ್ ಅಲ್ಲಿಗೆ ಹೋಗಿ ಈ ಸೇವೆ ಸಲ್ಲಿಸುತಿದ್ದಳು. ಹದಿನೆಂಟು ತಿಂಗಳ ಕಾಲ ಈ ರೀತಿ ಸೇವೆ ನಡೆಸುತ್ತಿರುವಾಗ, ಆ ಬಾಲಿಕೆಯ ರೋಗವು ಗುಣವಾಗಿರುವಂತಿರದೆ—ಅವಳು ಒಂದು ದಿನ ಮೆಡಲೀನಳ ಕೈಗಳಲ್ಲೆ ಪ್ರಾಣತ್ಯಾಗ ಮಾಡಿ, ಎಲ್ಲ ಸಂಕಷ್ಟಗಳಿಂದ ಮುಕ್ತಳಾದಳು.

ಕ್ರಿ. ಶ. ೧೮೪೦ರಲ್ಲಿ, ಮೆಡಲೀನಳು, ಇನ್ನೋರ್ವಳ ಶುಶ್ರೂಷೆಗಾಗಿ ನಿತ್ಯವೂ ಹೋಗುತಿದ್ದಾಗ ಒಮ್ಮೆ ಒಂದು ಹಳ್ಳವನ್ನು ದಾಟುತ್ತಿರಲು, ಕಾಲ್ಜಾರಿ ಬಿದ್ದು, ಜಲಸಮಾಧಿಹೊಂದುವುದರಲ್ಲಿದ್ದಳು. ಸುದೈವವಶಾತ್, ಬದುಕಿಕೊಂಡಳು.

ಫ್ರಾನ್ಸಿನಲ್ಲಿ ಚಳಿಗಾಲದಲ್ಲಿ ರಸ್ತೆಗಳು ಹಿಮದಿಂದ ಮುಚ್ಚಿಹೋಗುತ್ತವೆ. ಗ್ರಾಮಾಂತರ ನಿರ್ಜನ ಪ್ರದೇಶಗಳಲ್ಲಂತೂ ಹಿಮವು ಹೆಚ್ಚಾಗಿರುತ್ತದೆ. ದೂರದ ಗುಡ್ಡಗಳ ಬಳಿ, ಮಾನ್ಸೆಲ್ ನಾಮಾಂಕಿತ ಬಡ ಹೆಂಗುಸೊಬ್ಬಳು ಅಸ್ವಸ್ಥವಾಗಿ ಬಿದ್ದಿದ್ದಳು. ಅವಳ ಮನೆಯು ಹರಕುಮುರುಕಾಗಿತ್ತು. ಆ ಬಡಪಾಯಿಯನ್ನು ನೋಡುವವರಾರೂ ಇರಲಿಲ್ಲ. ಮೆಡಲೀನಳು ಆ ಹೆಂಗುಸಿನ ಸೇವೆಯನ್ನು ಕೆಲಕಾಲದಿಂದ ಮಾಡಿ, ತನ್ನ ಮನೆಗೆ ಹಿಂದಿರುಗುತಿದ್ದಳು. ಒಂದು ದಿನ ರಾತ್ರಿ, ಆ ಹೆಂಗುಸಿನ ಸ್ಥಿತಿಯು ವಿಷಮಾವಸ್ಥೆಗೆ ತಲಪಿತ್ತು. ಮೆಡಲೀನಳು ಅಲ್ಲೆ, ರಾತ್ರಿಕಾಲ ಉಳಕೊಳ್ಳಬೇಕಾಯಿತು. ಚಳಿಯು ವಿಪರೀತವಾಗಿತ್ತು. ಕೆಲವು ಕಟ್ಟಿಗೆ

ತುಂಡುಗಳನ್ನು ಉರಿಸಿ ಮೆಡಲೀನಳು ಸಾಧ್ಯವಿದ್ದಷ್ಟು ಶಾಖ ಹುಟ್ಟಿಸಲು ಯತ್ನಿಸುತಿದ್ದಳು. ಆಗ, ಒಡಕುಗಳಿರುವ ಕದವು, ದೂಡಲ್ಪಟ್ಟಂತಾಯಿತು. ಮೆಡಲೀನಳು ಹಿಂದಿರುಗಿ ನೋಡಿದಾಗ, ಬಾಗಿಲು ದೂಡುವುದು ಕಂಡಿತು. ಕೂಡಲೇ ಮೆಡಲೀನಳು, ಅಲ್ಲಿ ದೊರೆತ ವಸ್ತುಗಳನ್ನೆಲ್ಲ ತಂದು, ಆ ಬಾಗಿಲಿಗೆ ಅಡ್ಡವಾಗಿ ರಾಶಿಯೊಡ್ಡಿ, ಅದೂ ಸಾಕಾಗದೆ ತಾನೇ ಹೋಗಿ ಆ ಬಾಗಿಲನ್ನು ಬಲವಾಗಿ ಒತ್ತಿಟ್ಟು, ತೋಳವನ್ನು ಹೆದರಿಸಲು ಆಗಾಗ್ಗೆ ಗದರಿಸಿ ಕೂಗುತ್ತ, ನಿಂತಳು. ಆ ತೋಳವು ಬೆಳಗ್ಗಿನ ವರೆಗೆ ಬಾಗಿಲ ಹೊರಗೇ ಇರುತ್ತ, ಯಾವುದಾದರೊಂದು ಅಲಕ್ಷ್ಯದ ಕ್ಷಣದಲ್ಲಿ ಬಾಗಿಲನ್ನು ಬಲಾತ್ಕಾರದಿಂದ ಒಳಗೆ ದೂಡಿ ಒಳಗೆ ಬಂದು, ರೋಗಿಯನ್ನು ಹರಿದು ತಿನ್ನಲು ಹವಣಿಸುತಿತ್ತು. ಮೆಡಲೀನಳು ಬೆಳಗ್ಗಿನ ತನಕ ಬಾಗಿಲನ್ನು ಒತ್ತಿಟ್ಟೇ ನಿಲ್ಲಬೇಕಾಯಿತು. ಬೆಳಕಾದ ನಂತರ ತೋಳವು ಹೊರಟುಹೋಯಿತು.

ಆ ಹೆಂಗುಸು ಮರುದಿನ ತೀರಿಹೋದಳು. ಮೆಡಲೀನಳ ಈ ಈ ಕಾರ್ಯಗಳೆಲ್ಲ ಫ್ರಾನ್ಸಿನಲ್ಲಿ ಅಮರ ಕಥೆಗಳಾಗಿವೆ.

■■■■■■■■■

೮. ಶತ್ರುಗಳಿಂದ ಗೌರವಿಸಲ್ಪಟ್ಟ ಬಾಲಕ

ಇಟೇಲಿಯ ಈಶಾನ್ಯಕ್ಕಿರುವ ಟಾಯ್ರೋಲೀಸ್ ಎಂಬ ಪ್ರದೇಶದ ಮೇಲೆ ಫ್ರೆಂಚರು ಧಾಳಿ ಮಾಡಿದಾಗ, ಆರ್ಡ್ ನದೀ ತೀರದಲ್ಲಿರುವ ಒಂದು ಹಳ್ಳಿಯನ್ನು ಒಂದು ಪಡೆಯು ಪ್ರವೇಶಿಸಲು ಮುನ್ನಡೆದು ಬಂತು. ನದಿಯನ್ನು ದಾಟಿಯೇ ಆ ಹಳ್ಳಿಗೆ ಹೋಗಬೇಕಾಗಿತ್ತು. ನದಿಯು ಅಗಲ ಕಿರಿದಾದರೂ, ನೀರು ರಭಸದಿಂದ ಇಳಿಜಾರಾಗಿ ಹರಿಯುತಿತ್ತು. ದಡದ ಮೇಲಿನ ದೊಡ್ಡದೊಂದು ಮರವನ್ನು ಅಲ್ಲಿ, ಮೊದಲೇ ಕಡಿದು ಹಾಕಿದ್ದರು; ಆ ಮರವು ಇಡೀ ನದಿಗೆ ಅಡ್ಡವಾಗಿ ಬಿದ್ದುಕೊಂಡಿದ್ದು, ಒಂದು ತುದಿಯು ಹಳ್ಳಿ ಕಡೆಗೆ ಇತ್ತು. ಜನರು ಕಾಲು-ಸಂಕವಾಗಿ ಇದನ್ನು ಉಪಯೋಗಿಸುತಿದ್ದರು.

ಟಾಯ್ರೋಲಿಸಿನ ಮುನ್ನೂರು ಜನರೂ ಆಲ್ಬರ್ಟ್‌ಸ್ಪೆಕ್‌ಬೆಶರ್ ಎಂಬ ಹುಡುಗನೂ ಆ 'ಸಂಕ'ವನ್ನು ಕಾಯುತಿದ್ದರು. ಫ್ರೆಂಚ್ ಸೈನಿಕರು

ಅತ್ತ ಬರುತ್ತಿರುವರೆಂಬ ವದಂತಿ ಹಲಪ್ರತ್ತಲೇ, ಜನರು ಆ ಸಂಕವನ್ನು ಕೊಡಲಿಗಳಿಂದ ಕಡಿದು ಹಾಕ ತೊಡಗಿದರು. ದೂರದಿಂದ ಬರುತಿದ್ದ ಫ್ರೆಂಚ್ ಸೈನಿಕರು ಇದನ್ನು ಕಂಡು ಗುಂಡು ಹಾರಿಸಲು ತೊಡಗಿದರು. ಟಾಯ್ರೊಲೀಸಿನ ಧೀರರು ಒಬ್ಬೊಬ್ಬರಾಗಿಯೇ ಸತ್ತು ಬೀಳತೊಡಗಿದರು. ಹತರಾದವರಲ್ಲಿ ಆಲ್ಬರ್ಟನ ತಂದೆಯೂ ಒಬ್ಬನಾಗಿದ್ದನು.

ಆಲ್ಬರ್ಟನು ತನ್ನ ತಂದೆಯ ಸ್ಥಳವನ್ನು ತಾನು ಆಕ್ರಮಿಸಿದನು. ಸಂಕವು ಕಡಿಯಲ್ಪಡುತಿತ್ತು. ಕೊಡಲಿಯ ಇನ್ನೂ ಕೆಲವು ಪೆಟ್ಟುಗಳು ಬಿದ್ದರೆ, ಆ ಮರವು ಕಡಿದು ಹೋಗಿ, ಫ್ರೆಂಚರಿಗೆ ಆ ನದಿಯನ್ನು ದಾಟಲು ಸಾಧ್ಯವಾಗುತ್ತಿರಲಿಲ್ಲ. ಆದರೆ, ಗುಂಡಿನ ಸುರಿಮಳೆಯನ್ನು ಎದುರಿಸಿಯೇ ಆ ಸಾಹಸಕ್ಕೆ ಇಳಿಯಬೇಕಾಗಿತ್ತು. ಅಳಿದುಳಿದವರು ಹಿಂದೆ–ಮುಂದೆ ನೋಡುತಿದ್ದಾಗ ಆಲ್ಬರ್ಟನು ಒಂದು ಕೊಡಲಿಯನ್ನು ತೆಗೆದುಕೊಂಡು, ಫ್ರೆಂಚ್ ಬಂದೂಕುಗಳನ್ನೆದುರಿಸಿ ತನ್ನ ಜೀವದ ಹಂಗುದೊರೆದು, ಮರವನ್ನು ಕಡಿಯ ತೊಡಗಿದನು. ಆ ಬಾಲಕನಲ್ಲಿ ದೈವವೇ ಆವೇಶವನ್ನು ತುಂಬಿತ್ತು. ಆಲ್ಬರ್ಟನು ಕಡಿಯುತ್ತ ಹೋದನು. ಕೊನೆಗೆ, ಒಂದು ಚಿಕ್ಕ ತುಂಡು ಮಾತ್ರ ಉಳಿಯಿತು. ಅದನ್ನೂ ಕಡಿದರೆ ಸಂಕವು ಮುರಿದು ಬೀಳುವುದು!

ಆಲ್ಬರ್ಟನು ಇನ್ನೂ ಕಡಿಯಲು ಸಾಧ್ಯವಾಗದೆ, ತನ್ನ ಜೀವವನ್ನೆ ಅರ್ಪಿಸಲು ನಿಮಿಷಾರ್ಧದಲ್ಲಿ ನಿಶ್ಚಯಿಸಿದನು. ಕೊಡಲಿಯನ್ನು ಕೆಳಗೆ ಬಿಸಾಡಿ, ಬಲವಾಗಿ ತಾನೇ ಆ ಮರದ ಮೇಲಕ್ಕೆ ನೆಗೆದನು. ಸಂಕವೂ ಆಲ್ಬರ್ಟನೂ ಜತೆಜತೆಯಾಗಿ ಭೋರ್ಗರೆವ ನೀರಿಗೆ ಬಿದ್ದು, ಟಾಯ್ರೋಲೀಸ್ ಸುರಕ್ಷಿತವಾಯಿತು.

ಫ್ರೆಂಚರು ಹುಡುಗನ ಈ ಧೀರತೆಯನ್ನು ಕಂಡು ವಿಸ್ಮಯ ಹೊಂದಿದರು. ಅವರೇ ಆ ಬಾಲಕನ ಶವವನ್ನು ತೆಗೆದು, ಸೈನಿಕ ಗೌರವದಿಂದ ದಫನ ಮಾಡಿದರು; ಮತ್ತು ಅವನಿಗಾಗಿ ತಾವೇ ಒಂದು ಸ್ಮಾರಕವನ್ನು ರಚಿಸಿದರು.

ಒಂದಾಣೆ ಮಾಲೆಯಲ್ಲಿ

ಬೋಧಪ್ರದ ಕಥಾ ಸಂಗ್ರಹಗಳು
ವಿನೋದ ಲೇಖನಗಳು
ಏಕಾಂಕ ಪ್ರಹಸನಗಳು
ಮುಂದಿನ ವಾರಗಳಲ್ಲಿ
ಪ್ರಕಟಣವಾಗಲಿವೆ

ಒಂದಾಣೆ ಮಾಲೆಯು 48 ಪ್ರಕಟಣೆಗಳಲ್ಲಿ
ಹೊದಿಕೆ ಕೂಡಿ 1064 ಪುಟಗಳನ್ನು ಕೊಟ್ಟಿರುತ್ತದೆ.

ಕಥಾ ಸಂಗ್ರಹಗಳು--19
ಏಕಾಂಕ ನಾಟಕಗಳು—7
ರೆಡಿಯೋ ನಾಟಕ——1
ಸ್ಥಳ ಚರಿತ್ರೆಗಳು——6
--ಮತ್ತು ಸುಭಾಷಿತ, ನೀತಿಶತಕ, ಒಗಟುಗಳು
ಇತ್ಯಾದಿ, ಇತ್ಯಾದಿ

ವಾರಕ್ಕೊಂದು ಹೊಸ ಪುಸ್ತಕ—ಪ್ರತಿಯೊಂದಕ್ಕೆ ಒಂದಾಣೆ.

ಒಂದಾಣೆ ಮಾಲೆ

ಪ್ರಭಾತ ಆಫೀಸು,
ರಥಬೀದಿ, ಮಂಗಳೂರು-೧.

To make a long Story

SHORT

ಸುದೀರ್ಘ ಗೋಷ್ಟಿಯನ್ನು ಸಂಕ್ಷಿಪ್ತಗೊಳಿಸುವುದಾದರೆ....

—ಅಹುದು. ನಿಮ್ಮ ಮಗುವು ಹಣವುಳಿಸುವಂತೆ, ಉಳಿಸಿದಷ್ಟನ್ನು ಸೇವಿಂಗ್ಸ್ ಬೇಂಕ್ ಖಾತೆಯಲ್ಲಿ ಠೇವಣಿಯಿರಿಸುವಂತೆ, ಆ ಮಗುವಿಗೆ ಕಲಿಸಬಲ್ಲಿರಾದರೆ, ನಿಮ್ಮ ಮಗುವನ್ನು ನೀವು ಊಹಿಸಿದ್ದಕ್ಕಿಂತಲೂ ಅಲ್ಪಾವಧಿಯಲ್ಲಿ ಸಾರ್ಥಕ್ಯಕ್ಕೂ ಸೌಭಾಗ್ಯ'ಸಂತೋಷಗಳಿಗೂ ಕರೆದೊಯ್ಯಬಲ್ಲಿರಿ.

ಚಲಾವಣೆ ಬಂಡವಾಲ ರೂ. 6,50,00,000.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿ.

THE CANARA INDUSTRIAL & BANKING SYNDICATE Ltd

ESTD. 1925

H.O. UDIPI (S.I) HOMJI St. BOMBAY

Edited, Printed & Published by K. V. Shenoy
at The Prabhat Printers, Ltd., Mangalore.